6

# ದೇವರ ಕುಟುಂಬ

*“ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ” (ಎಫೆಸ 2:19).*

ನಿಮ್ಮ ಕೈಗೆ ಒಂದು ಖಾಲಿ ಪೇಪರ್ ಕೊಟ್ಟು, ಮಾನವ ಕುಲಕ್ಕೆ ದೇವರು ಕೊಟ್ಟ ಅತೀ ಹೆಚ್ಚು ತೃಪ್ತಿಕರವಾದ ಹತ್ತು ಆಶೀರ್ವಾದಗಳ ಯಾದಿ ಮಾಡಬೇಕೆಂದು ನಿಮಗೆ ಹೇಳಲ್ಪಟ್ಟಾಗ, ನೀವು ಯಾವವುಗಳನ್ನು ಯಾದಿಮಾಡುವಿರಿ? ಯಾವ ಹತ್ತುಗಳನ್ನು ಮಾನವ ಕುಲಕ್ಕೆ ದೇವರ ಅತೀ ಐಶ್ವರ್ಯದ ಮತ್ತು ಅತೀ ಹೆಚ್ಚು ಸಹಾಯಕವಾದ ಲಾಭಗಳು ಎಂದು ನೀವು ಯೋಚಿಸುವಿರಿ?

ಹೆಚ್ಚಾದ ಜನರು, ತಮ್ಮ ಯಾದಿಯಲ್ಲಿ ಮೊದಲನೆಯದಾಗಿ ಕುಟುಂಬವನ್ನು ಇಡುವರೆಂದು ನಾನು ನಂಬುತ್ತೇನೆ. ಅಗಣಿತ ಆನಂದಗಳು ಮತ್ತು ಸಹಾಯಕ ಸಂಬಂಧಗಳು ಕುಟುಂಬದ ಮುಖಾಂತರ ಅದು ಎದೇನ್ ತೋಟದಲ್ಲಿ ಅದರ ಸೃಷ್ಟಿಯ ಪ್ರಾರಂಭದಿಂದ ಅತೀ ಇತ್ತೀಚೆಗಿನ ಮದುವೆಯ ಆಚರಣೆಯ ವರೆಗೆ ಅನುಭವಿಸಲ್ಪಟ್ಟಿದೆ. ಹೆಚ್ಚಾದ ಜನರು ತಮ್ಮ ಬಹಳ ಆನಂದದ ಸ್ಮರಣೆಗಳು ತಾವು ಬೆಳೆದ ಮನೆಗಳ ಸುತ್ತ ಮತ್ತು/ಇಲ್ಲವೇ ಸಧ್ಯ ಅವರು ವಾಸಿಸುತ್ತಿರುವ ಮನೆಗಳ ಸುತ್ತ ಇದ್ದವು ಎಂದು ಹೇಳಬಹುದು. ಇದಲ್ಲದೇ, ಕೆಲವರನ್ನು ಬಿಟ್ಟು ಎಲ್ಲಾ ಜನರೂ ತಾವು ತಮ್ಮ ಅತೀ ದೊಡ್ಡ ಬಲವನ್ನೂ ಮತ್ತು ಸಹಾಯವನ್ನೂ ತಮ್ಮ ಕುಟಂಬದ ಸದಸ್ಯರೊಂದಿಗೆ ಜೀವಿಸುವದರಿಂದ ಪಡೆದುಕೊಂಡೆವೆಂದು ಹೇಳುವರೆಂದು ನಾನು ನಂಬುತ್ತೇನೆ. ನಿಜವಾಗಿಯೂ, ಕುಟುಂಬವು ಪ್ರೀತಿಸುವ ಪರಲೋಕದ ತಂದೆಯಿಂದ ಮಾನವ ಜನಾಂಗಕ್ಕೆ ಕೊಡಲ್ಪಟ್ಟಿತು. ಆತನು ಇದನ್ನು ನಮ್ಮ ಆತ್ಮಗಳಿಗೆ ಪ್ರೀತಿಭರಿತವಾದ, ಸಹಾನುಭೂತಿಯುಳ್ಳ ಪ್ರೋತ್ಸಾಹವನ್ನು ಕೊಡುವದಕ್ಕಾಗಿ ಆತನು ರೂಪಿಸಿದನು.

ಕುಟುಂಬವು ನಮಗೆ ಹೇಗೆ ಅರ್ಥಗರ್ಭಿತವಾಗಿದೆ ಎಂಬುದರ ಬೆಳಕಿನಲ್ಲಿ, ಅದು ಹೊಸ ಒಡಂಬಡಿಕೆಯ ಸಭೆಯನ್ನು ದೃಷ್ಟಿಸಿಕೊಳ್ಳಲು ನಮಗೆ ಸಹಾಯ ಮಾಡುವದಕ್ಕಾಗಿ ಪರಿಶುದ್ಧ ಬರಹಗಳಲ್ಲಿ ಸಂಕೇತಿಕವಾಗಿ ಉಪಯೋಗಿಸಿದ್ದರಲ್ಲಿ ನಾವು ಆಶ್ಚರ್ಯಪಟ್ಟುಕೊಳ್ಳಬಾರದು. ಪರಿಶುದ್ಧ ಬರಹಗಳಲ್ಲಿ “ಕುಟುಂಬ” ಮತ್ತು “ಮನೆಯವರು” ಎಂಬ ಪದಗಳ ಉಪಯೋಗವು ಸಭೆಯನ್ನು ನಾವು ದೇವರ ಕುಟುಂಬದಂತೆ ನೋಡಲು ನಮಗೆ ಒತ್ತಾಯ ಮಾಡುತ್ತದೆ. ನಾವು ಕ್ರೈಸ್ತರಾಗುವಾಗ, ನಾವು ದೇವರ ಆತ್ಮಿಕ ಕುಟುಂಬದಲ್ಲಿ, ಸಭೆಯಲ್ಲಿ ಜನಿಸಿದ್ದೇವೆ (ಯೋಹಾನ 3:5; ಎಫೆಸ 2:19). ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಕ್ರಿಸ್ತನ ಸುವಾರ್ತೆಗೆ ನಾವು ವಿಧೇಯರಾಗುವಾಗ, ಕ್ರಿಸ್ತನ ದೇಹವನ್ನು ಪ್ರವೇಶಿಸುವಾಗ, ದೇವರು ನಮ್ಮನ್ನು ತನ್ನ ಮಕ್ಕಳಂತೆ ಸ್ವೀಕರಿಸುತ್ತಾನೆ (ಎಫೆಸ 1:5). ಪೌಲನು ಈ ಸ್ವೀಕಾರವನ್ನು ಅಂತಿಮ

ಪರಿಣಾಮದಂತೆ, ಕ್ರಿಸ್ತನು ಈ ಲೋಕಕ್ಕೆ ಬರುವದರಲ್ಲಿ ಮುಖ್ಯ ಕಾರಣವೆಂದು ತೋರಿಸಿದ್ದಾನೆ: "ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸ ಬೇಕೆಂತಲೂ ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವದನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು" (ಗಲಾತ್ಯ 4:4, 5).

## ಅಗತ್ಯತೆಗಳು

ಎಲ್ಲಾ ಮಾನವ ಜೀವಿಗಳು ಪ್ರಾಪಂಚಿಕ ಕುಟುಂಬದಿಂದ ಮಾತ್ರವೇ ಪೂರೈಸಲ್ಪಡಬಹುದಾದ ಕೆಲವೊಂದು ಮಟ್ಟದ ಅಗತ್ಯತೆಗಳನ್ನು ಹೊಂದಿಕೊಂಡಿರುತ್ತವೆ. ಈ ಅಗತ್ಯತೆಗಳು ಯಾವವು? ಮೊದಲನೆಯದು, ನಮ್ಮಲ್ಲಿ ಪ್ರತಿಯೊಬ್ಬರೂ *ಒಬ್ಬರಿಗೊಬ್ಬರು ಹೊಂದಿಕೊಂಡಿರುವ* ಇಲ್ಲವೇ "ಬೇರುಗಳ" ಅರ್ಥವನ್ನು ಅಗತ್ಯತೆಯುಳ್ಳವರಾಗಿದ್ದೇವೆ. ಪ್ರಾಪಂಚಿಕ ಕುಟುಂಬವು ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ. ಅದು ನಮಗೆ ಈ ಲೋಕದಲ್ಲಿ ನಮಗೆ, ನಮಗೆ ಮಾತ್ರವೇ ಒಳಗೊಂಡಿರುವ ನಿಶ್ಚಿತವಾದ ಸ್ಥಾನವನ್ನು ಕೊಡುತ್ತದೆ.

ಎರಡನೆಯದು, *ಭದ್ರತೆಯ ಭಾವನೆಯನ್ನು ಹೊಂದಿಕೊಂಡಿರುವ* ಅಗತ್ಯತೆ ನಮಗಿದೆ; ನಾವು ಮಾನಸಿಕವಾಗಿ, ಸಾಮಾಜಿಕವಾಗಿ, ಇಲ್ಲವೇ ದೈಹಿಕವಾಗಿ ನಾವು ಯಾವಾಗಲಾದರೂ ಸಹಾಯವಿಲ್ಲದವರಾಗುವಾಗ ನಮ್ಮನ್ನು ಜೋಪಾಸನೆ ಮಾಡುವ ಸಮಾಜದ ಒಂದು ಭಾಗ ನಾವಾಗಿರುವೆವೆಂಬ ಭರವಸೆ ನಮಗೆ ಬೇಕಾಗಿದೆ. ಪ್ರಾಪಂಚಿಕ ಕುಟುಂಬವು ನಮಗಾಗಿ ಈ ಭದ್ರತೆಯನ್ನು ಒದಗಿಸುತ್ತದೆ. ಜೀವನದ ಬಿರುಗಾಳಿಗಳಿಂದ ಅದು ನಮಗೆ ಆಶ್ರಯ ಕೊಡುತ್ತದೆ. ನಮ್ಮಷ್ಟಕ್ಕೆ ನಾವೇ ಜೋಪಾಸನೆ ಮಾಡಿಕೊಳ್ಳದಷ್ಟು ಶಿಶುಗಳಾಗಿದ್ದಾಗ ಅದು ನಮಗೆ ಒದಗಿಸಿತು. ನಾವು ಅಸ್ವಸ್ಥರಾಗುವಾಗ ಇಲ್ಲವೇ ಆತ್ಮದಲ್ಲಿ ಮುರಿದವರಾಗುವಾಗ ಅದು ಒದಗಿಸುತ್ತದೆ. ನಾವು ವಯಸ್ಸಾದವರಾಗುವಾಗ ಮತ್ತು ಬಲಹೀನರಾಗುವಾಗ, ನಮ್ಮ ಎರಡನೆಯ ಬಾಲ್ಯಾವಸ್ಥೆಯಲ್ಲಿ ಅದು ನಮಗೆ ಒದಗಿಸುತ್ತದೆ. ಅದು ನಮ್ಮ ಆಶ್ರಯವು, ನೆಲೆಯು ನಮ್ಮ ಸಹಾಯದ ಶಿಲೆಯು ಆಗಿರುತ್ತದೆ.

ಮೂರನೆಯದು, ನಮಗೆ *ವ್ಯಕ್ತಿತ್ವದ ಭಾವನೆಯ* ಅಗತ್ಯತೆಯಿದೆ. ನಾವು ಯಾರಾಗಿದ್ದೇವೆ ಮತ್ತು ಏನಾಗಿದ್ದೇವೆ ಎಂಬುದನ್ನು ತಿಳಿಯಲಿಕ್ಕೆ ನಮಗೆ ಆಂತರಿಕ ಒತ್ತಡವಿರುತ್ತದೆ. ಕೆಲಮಟ್ಟಿಗೆ, ನಮ್ಮ ಪ್ರಾಪಂಚಿಕ ಕುಟಂಬಗಳು ಈ ಬಯಕೆಗೆ ಉತ್ತರ ಕೊಡುತ್ತವೆ.

ನಾಲ್ಕನೆಯದು, *ಸ್ವೀಕಾರದ ಭಾವನೆಯ* ಅಗತ್ಯತೆ ನಮಗೆ ಇರುತ್ತದೆ. ಅಲಂಕಾರವಿಲ್ಲದೆ, ಮುಖವಾಡವಿಲ್ಲದೆ ನಮ್ಮಷ್ಟಕ್ಕೆ ನಾವೇ ಇರುವಂತೆ ತಿಳಿದು ಕೊಳ್ಳುವ ಭದ್ರತೆ ನಮಗೆ ಬೇಕಾಗುತ್ತದೆ. ಪ್ರಾಪಂಚಿಕ ಕುಟುಂಬವು ನಾವಾಗಿರುವದಕ್ಕಾಗಿ ನಮ್ಮನ್ನು ಪ್ರೀತಿಸುತ್ತದೆ. ನಾವು ಮುಂದೇನು ಆಗುತ್ತೇವೋ ಅದಕ್ಕಾಗಿ ಅಲ್ಲ ಇಲ್ಲವೇ ನಾವು ಏನಾಗಿದ್ದೇವೋ ಅದಕ್ಕಾಗಿ ಅಲ್ಲ. ನಮ್ಮ ಪ್ರಾಪಂಚಿಕ ಕುಟುಂಬಗಳಲ್ಲಿ ಸ್ವೀಕರಿಸಲ್ಪಡ ಬೇಕಾದರೆ ಸಾಧಿಸಲ್ಪಡಬೇಕಾಗಿರುವದಿಲ್ಲ. ನಾವು ಅತ್ಯುತ್ತಮರಾಗಿರಲು ಇಲ್ಲವೇ ಅತ್ಯುತ್ತಮವಾದದ್ದನ್ನು ಮಾಡಲು ಶಕ್ತರಾಗದಿದ್ದರೆ, ನಾವು ಇನ್ನೂ ಪ್ರೀತಿಸಲ್ಪಡುತ್ತೇವೆ ಮತ್ತು ನಮ್ಮ ಬಂಧುಗಳ ಮಧ್ಯದಲ್ಲಿ ನಮಗಿನ್ನೂ ಸ್ಥಳವಿರುತ್ತದೆ. ನಾವು ಹೊಂದಿಕೊಳ್ಳುವ ಪ್ರೀತಿಯನ್ನು ನಾವು ಸಂಪಾದಿಸಬೇಕಾಗಿರುವದಿಲ್ಲ; ಅದು ಯಾವುದೇ ಶರತ್ತು ಇಲ್ಲವೇ ಬೇಡಿಕೆಗಳಿಲ್ಲದೇ ಕೊಡಲ್ಪಡುತ್ತದೆ.

ಮಾನವ ಜೀವಿಗಳಿಗೆ, ದೈಹಿಕ ಕುಟುಂಬದಿಂದ ತೃಪ್ತಿಪಡಿಸಲ್ಪಡುವ ಮಾನಸಿಕ, ಸಾಮಾಜಿಕ ಮತ್ತು ದೈಹಿಕ ಅಗತ್ಯತೆಗಳಲ್ಲಿ ಒಂದು ರೀತಿಯಲ್ಲಿ ಸಂಬಂಧಿಸಿರುವ ಆತ್ಮಿಕ ಅಗತ್ಯತೆಗಳಿಗಿರುತ್ತವೆ. ಕೆಲವು ಜನರು ಈ ಆತ್ಮಿಕ ಅಗತ್ಯತೆಗಳನ್ನು ತಮ್ಮಲ್ಲಿಯೇ ನೋಡಿಕೊಳ್ಳುತ್ತಾರೆ, ಇತರರು ನೋಡಿಕೊಳ್ಳುವದಿಲ್ಲ. ಅವುಗಳನ್ನು ನಾವು ಗುರುತಿಸಲಿ ಇಲ್ಲವೇ ಬಿಡಲಿ, ಅವು ವಾಸ್ತವಿಕವಾದವುಗಳಾಗಿವೆ ಹಾಗೂ ಈ ಜಗತ್ತಿನಲ್ಲಿ ನಿಜವಾದ ಸಂತೋಷದಲ್ಲಿ ಜೀವಿಸಲಿಕ್ಕೆ ನಮಗಾಗಿ ಪೂರೈಸಲ್ಪಡತಕ್ಕದ್ದು. ಮಾನವ ವ್ಯಕ್ತಿತ್ವ ಮತ್ತು ಆತ್ಮಕ್ಕೆ ಆತ್ಮಿಕ ಆಯಾಮ ಇರುತ್ತದೆ. ಈ ಗುಣಲಕ್ಷಣಗಳು ಗಮನಿಸಲ್ಪಡದೇ ಇರುವಾಗ ಇಲ್ಲವೇ ಅಲಕ್ಷಿಸಲ್ಪಟ್ಟಾಗ, ನಾವು ಒಂದು ರೀತಿಯ ಸಾಮಾಜಿಕ ಮತ್ತು ದೈಹಿಕ ಸಂತೋಷವನ್ನು ಅನುಭವಿಸಿದರೂ, ನಮಗಾಗಿ ದೇವರು ಉದ್ದೇಶಿಸಿದ ಆತ್ಮಿಕ ಸಂತೋಷವನ್ನು ಮತ್ತು ನೆರವೇರುವಿಕೆಯನ್ನು ಅನುಭವಿಸಲಾರೆವು.

ಶೌಚಾಲಯವನ್ನು ಜೇಡರ ಬಲೆಗಳನ್ನು ಮಾತ್ರ ತೆಗೆದು ಹಾಕುವದರಿಂದ ಸ್ವಚ್ಛಮಾಡಿದರೆ ಏನಾಗುತ್ತದೆ? ನಾನು ಯಾವಾಗಲೂ ಇತರ ಜೇಡರ ಬಲೆಗಳನ್ನು ತೆಗೆದು ಹಾಕುತ್ತಿರುವದರಲ್ಲಿ ಕಂಡು ಬರುವದಿಲ್ಲವೋ? ಜೇಡರ ಹುಳವು ಬಲೆಗಳನ್ನು ಹೆಣೆಯುತ್ತದೆ, ಮತ್ತು ನನ್ನ ಶೌಚಾಲಯದಲ್ಲಿ ಜೇಡರ ಹುಳವು ಉಳಿದುಕೊಂಡಿರುವವರೆಗೆ, ಅದು ಅಲ್ಲಿ ಬಲೆಗಳನ್ನು ಹೆಣೆಯುತ್ತಲೇ ಹೋಗುವುದು.

ಬಾತ್‌ರೂಮ್ ನೆಲದ ಮೇಲೆ ನೀರು ಹರಿಯುತ್ತಿರುವದನ್ನು ಕಂಡರೆ ಏನಾಗುತ್ತದೆ? ಕೇವಲ ಅದನ್ನು ಒರೆಸುತ್ತ ಹೋದರೆ ನೀರನ್ನು ತೆಗೆದು ಹಾಕುವದರಲ್ಲಿ ನಾನು ಎಷ್ಟು ಯಶಸ್ವಿಯಾಗುವೆನು? ನೀರು ಒಂದು ಮೂಲದಿಂದ ಬರುತ್ತಿರುವುದು, ಮತ್ತು ಆ ಮೂಲವನ್ನು ಕಂಡುಕೊಂಡು, ಅದನ್ನು ಸರಿಪಡಿಸದಿದ್ದರೆ, ಬಾತ್‌ರೂಮ್ ನೆಲದ ಮೇಲಿಂದ ನೀರನ್ನು ಒರೆಸುತ್ತಲೇ ಇರುವೆನು.

ಪ್ರತಿಯೊಬ್ಬ ಮಾನವನಿಗೆ ಸಾಮಾನ್ಯವಾಗಿರುವ ಆತ್ಮಿಕ ಅಗತ್ಯತೆಗಳು ಹೊರಟು ಹೋಗುವದಿಲ್ಲ. ಅವು ಅಸ್ತಿತ್ವದಲ್ಲಿ ಇರುವುದಿಲ್ಲ ಎಂದು ನಾವು ನಟಿಸುವದರಿಂದ ಅವು ಆರಿ ಹೋಗುವದಿಲ್ಲ. ಸಾಮಾನ್ಯವಾದ ದೈಹಿಕ ಆನಂದವನ್ನು ಮತ್ತು ಆತ್ಮಿಕ ಸಂತೋಷವನ್ನು ನಾವು ಅನುಭವಿಸಬೇಕಾದರೆ, ಈ ದೈಹಿಕ ಮತ್ತು ಆತ್ಮಿಕ ಅಗತ್ಯತೆಗಳು ಪೂರೈಸಲ್ಪಡಬೇಕು.

## ಅಗತ್ಯತೆಗಳು ಪೂರೈಸಲ್ಪಟ್ಟವು

ನಾವೆಲ್ಲರೂ ಹೊಂದಿಕೊಂಡಿರುವ ಆತ್ಮಿಕ ಆಗತ್ಯತೆಗಳು ಇನ್ನೊಂದು ಕುಟುಂಬದಿಂದ, ದೇವರ ಕುಟುಂಬದಿಂದ ತೃಪ್ತಿಪಡಿಸಲ್ಪಟ್ಟಿವೆ. ತನ್ನ ಆತ್ಮಿಕ ಕುಟುಂಬ ದಲ್ಲಿ ದೇವರು ತಂದೆಯಾಗಿದ್ದಾನೆ (1 ಯೋಹಾನ 3:1), ಕ್ರೈಸ್ತರು ಸಹೋದರರು ಮತ್ತು ಸಹೋದರಿಯರು ಆಗಿದ್ದಾರೆ (1 ಯೋಹಾನ 5:1), ಮತ್ತು ಯೇಸುವು ಹಿರಿಯ ಸಹೋ ದರನಾಗಿದ್ದಾನೆ (ರೋಮಾಪುರ 8:17). ಪೌಲನು ಈ ಪರಲೋಕದ ಕುಟುಂಬವನ್ನು "ಸಭೆಯಂತೆ" ಉಲ್ಲೇಖಿಸಿದನು. "ಬೇಗನೆ ನಿನ್ನ ಬಳಿಗೆ ಬರುವೆನೆಂದು ನನಗೆ ನಿರೀಕ್ಷೆ ಯುಂಟು; ಆದರೆ ಒಂದು ವೇಳೆ ನಾನು ತಡ ಮಾಡಿದರೂ *ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ* ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ" (1 ತಿಮೊಥೆ 3:14, 15; ಒತ್ತಿ ಹೇಳಿದ್ದು ನನ್ನದು).

ಹೊಸ ಒಡಂಬಡಿಕೆಯ ಸಭೆಯಲ್ಲಿ, ಒಬ್ಬ ಕ್ರೈಸ್ತನು ಆತ್ಮಿಕ *ಹೊಂದಿಕೊಂಡಿರುವಿಕೆಯ ಭಾವನೆಯನ್ನು* ಅನುಭವಿಸುತ್ತಾನೆ. ಅವನಿಗೆ ಪ್ರಾರ್ಥಿಸಲಿಕ್ಕೆ

ನಡಿಯಲಿಕ್ಕೆ ಮತ್ತು ಜೀವಿಸಲಿಕ್ಕೆ ಪರಲೋಕದ ತಂದೆಯಿರುತ್ತಾನೆ. ಪ್ರಾರ್ಥಿಸಲಿಕ್ಕೆ ಕಲಿತುಕೊಳ್ಳಲಿಕ್ಕೆ ಮತ್ತು ಆಶ್ರಯಿಸುವುದಕ್ಕೆ ಒಬ್ಬ ಹಿರಿಯ ಸಹೋದರನಿರುತ್ತಾನೆ. ಒಂದು ಸಂಘಟನೆಯಂತೆ ಅಲ್ಲ ಆದರೆ ಒಂದು ಆತ್ಮಿಕ ಕುಟುಂಬದಂತೆ - ಒಬ್ಬರೊಬ್ಬರು ಸಹೋದರ, ಸಹೋದರಿಯರಂತೆ ಪ್ರೀತಿಸುವ ಮತ್ತು ದೇವರ ಮಹಿಮೆಗಾಗಿ ಒಂದಾಗಿ ಕೆಲಸಮಾಡುವ ವಿಶ್ವಾಸಿಗಳ ಒಂದು ಸಮಾಜದ ಭಾಗದಂತೆ ಅವನು ಜೀವಿಸುವನು.

ದೇವರ ಕುಟುಂಬದಲ್ಲಿ, ನಮಗೆ *ಆತ್ಮಿಕ ಭದ್ರತೆಯ ಭಾವನೆ* ಇರುತ್ತದೆ. ನಮ್ಮ ಪರಲೋಕದ ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮಗಾಗಿ ಒದಗಿಸುತ್ತಾನೆ. ನಮ್ಮ ದೈಹಿಕ ಅಗತ್ಯತೆಗಳನ್ನು ಆತನು ಪೂರೈಸುವನು. ಚಿಂತಿಸಬಾರದೆಂದು ತನ್ನ ಅನುಯಾಯಿಗಳಿಗೆ ಬೋಧಿಸಿದಂತೆ, ಯೇಸುವು ನಮಗೆ ನಮ್ಮ ತಂದೆಯು ನಮ್ಮ ಅಗತ್ಯತೆಗಳನ್ನು ಬಲ್ಲನು ಮತ್ತು ನಮಗಾಗಿ ಜೋಪಾಸನೆ ಮಾಡುವನು ಎಂಬುದನ್ನು ಜ್ಞಾಪಿಸಿಕೊಳ್ಳಲು ಒತ್ತಾಯಪಡಿಸಿದನು: "ಏನು ಊಟ ಮಾಡಬೇಕು, ಏನು ಕುಡಿಯ ಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ. ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕಪಡುತ್ತಾರೆ. ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕ ದಲ್ಲಿರುವ ನಿಮ್ಮ ತಂದೆಗೆ ತಿಳಿದದೆಯಷ್ಟೆ" (ಮತ್ತಾಯ 6:31, 32). ಹಾಗೆಯೇ, ನಮ್ಮ ತಂದೆಯು ನಮ್ಮ ಆತ್ಮಿಕ ಅಗತ್ಯತೆಗಳನ್ನು ಒದಗಿಸುತ್ತಾನೆ. ದೇವರನ್ನು ಈ ರೀತಿಯಲ್ಲಿ ಉಲ್ಲೇಖಿಸುವದರಿಂದ ತನ್ನ ಪತ್ರವನ್ನು ಮುಕ್ತಾಯಗೊಳಿಸಿದ ಸ್ತೋತ್ರ ಗೀತದಲ್ಲಿ ಈ ಪಾರಲೌಕಿಕ ಜೋಪಾಸನೆಯನ್ನು ಯೂದನೂ ನಮಗೆ ಜ್ಞಾಪಿಸಿದ್ದಾನೆ. "ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವದಕ್ಕೂ ಶಕ್ತನಾಗಿರುವನು" (ಯೂದ 24).

ನಮ್ಮ ಅಗತ್ಯತೆಯು *ಆತ್ಮಿಕ ಗುರುತಿಸುವಿಕೆಯ ಭಾವನೆಗಾಗಿ* ಇರುವುದು, ದೇವರ ಕುಟುಂಬದಲ್ಲಿ, ಸಭೆಯಲ್ಲಿ ಸಹ ಪೂರೈಸಲ್ಪಡುವುದು. ಮಾರ್ಪಡುವಿಕೆ ಮೊದಲು ಉದ್ದೇಶವಿಲ್ಲದೇ ಇಲ್ಲವೇ ನಿರ್ದೇಶನವಿಲ್ಲದೇ ನಡೆದಾಡುತ್ತಿದ್ದೆವು, ಆದರೆ ದೇವರ ಕುಟುಂಬದಲ್ಲಿ ಜನಿಸುವುದರ ಮುಖಾಂತರವಾಗಿ ನಾವು ದೇವರ ಸ್ವಂತ ಸೊತ್ತಾಗಿದ್ದೇವೆ. ಪೇತ್ರನು ಈ ಬದಲಾವಣೆಯನ್ನು ಬರೆದನು:

> ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗು ವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ, ಈಗ ದೇವರ ಪ್ರಜೆಯಾಗಿದ್ದೀರಿ; ಮೊದಲು ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯ ಹೊಂದಿದವರಾಗಿದ್ದೀರಿ (1 ಪೇತ್ರ 2:9, 10).

ದೇವರ ಕುಟುಂಬಕ್ಕೆ ದೇವರ ಸ್ವಾಸ್ಥ್ಯದಂತೆ ಪೌಲನೂ ಉಲ್ಲೇಖಿಸಿದ್ದಾನೆ (ಎಫೆಸ 1:18). ದೇವರ ಕುಟುಂಬದ ಸದಸ್ಯರಂತೆ ಕ್ರೈಸ್ತರಿಗೆ ನಿತ್ಯವಾದ ಬಾಧ್ಯತೆ - ಪರಲೋಕ ಇರುತ್ತದೆ; ದೇವರಿಗೆ ಒಂದು ಸೊತ್ತು - ಕ್ರೈಸ್ತರು ಇರುವರು!

ಅದರಂತೆಯೇ ದೇವರ ಕುಟುಂಬವೂ ನಮಗೆ *ಆತ್ಮಿಕ ಸ್ವೀಕಾರದ ಭಾವನೆಯನ್ನು* ಒದಗಿಸುವುದು. ವಿಧೇಯ ವಿಶ್ವಾಸದಲ್ಲಿ ದೇವರ ಬಳಿಗೆ ನಾವು ಬರುವಂತೆ ಮತ್ತು ನಂಬಿಕೆಯಲ್ಲಿ ಹಾಗೂ ಯಥಾರ್ಥವಾದ ವಿಧೇಯತೆಯಲ್ಲಿ ಜೀವಿಸುವಂತೆ, ನಾವು ಆತನ ಮಕ್ಕಳಂತೆ ಸ್ವೀಕರಿಸಲ್ಪಡುತ್ತೇವೆ. ಆತನು ನಮ್ಮ ಮೇಲೆ ತನ್ನ ವಿಶೇಷವಾದ ಪ್ರೀತಿಯನ್ನು

ಅನುಗ್ರಹಿಸುತ್ತಾನೆ ಮತ್ತು "ಅಪ್ಪಾ! ತಂದೆಯೇ!" ಎಂದು ಕೂಗುವ ತನ್ನ ಆತ್ಮವನ್ನು ನಮ್ಮ ಹೃದಯಗಳಲ್ಲಿ ಇಡುತ್ತಾನೆ (ಗಲಾತ್ಯ 4:6). ಕ್ರಿಸ್ತನಲ್ಲಿ ಪೌಲನೊಂದಿಗೆ ನಾವು ಹೀಗೆ ಹೇಳುತ್ತೇವೆ, "ಆದದರಿಂದ ಕ್ರಿಸ್ತಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ" (ರೋಮಾಪುರ 8:1). ಮಾನಸಾಂತರ ಮತ್ತು ಬೆಳವಣಿಗೆಗಳು ಇನ್ನು ಮುಂದೆ ನಿರೀಕ್ಷಿಸಲ್ಪಡುವದಿಲ್ಲ ಎಂದು ಇದರ ಅರ್ಥವಾಗುವದಿಲ್ಲ; ಇದರ ಅರ್ಥ ನಾವಿರುವಲ್ಲಿಯೇ ಆತನು ನಮ್ಮನ್ನು ಸ್ವೀಕರಿಸುತ್ತಾನೆ ಮತ್ತು ನಾವು ಏನಾಗಿರಬೇಕೋ ಅದಾಗುವಂತೆ ಮೃದುವಾಗಿ ನಡಿಸುತ್ತಾನೆ ಎಂದರ್ಥವಾಗುತ್ತದೆ. ಯಾರೋ ಒಬ್ಬರು, "ನಾವು ಇರುವಂತೆ ಆತನು ನಮ್ಮನ್ನು ಪ್ರೀತಿಸುತ್ತಾನೆ, ಆದರೆ ನಾವಿರುವಂತೆ ಬಿಡದಷ್ಟು ಆತನು ನಮ್ಮನ್ನು ಪ್ರೀತಿಸುತ್ತಾನೆ" ಎಂದು ಹೇಳಿದ್ದಾರೆ.

ಅನೇಕ ವರ್ಷಗಳ ಹಿಂದೆ, ಇಂಗ್ಲಾಂಡಿನ ಲಂಡನ್ನಿನಲ್ಲಿ, ಮದುವೆಯಾದ ಒಬ್ಬ ಯುವ ಮಹಿಳೆಯನ್ನು ಕ್ರಿಸ್ತನ ಬಳಿಗೆ ನಡಿಸಲು ಪ್ರಯತ್ನಿಸಿದ್ದನ್ನು ಜ್ಞಾಪಿಸಿಕೊಳ್ಳುತ್ತೇನೆ ಆಕೆ ಒಂದು ಮಗುವಿನ ಸುಂದರವಾದ ಯುವ ತಾಯಿಯಾಗಿದ್ದಳು. ಮದುವೆಯಾದ ಕೆಲತಿಂಗಳುಗಳ ನಂತರ, ಆಕೆಯ ಗಂಡ ಆಕೆಯನ್ನು ಬಿಟ್ಟು ಹೋದನು, ಮತ್ತು ಆಕೆ ತನ್ನ ಮಗುವನ್ನು ತಾನೇ ಬೆಳಸಲು ಪ್ರಯತ್ನಿಸುತ್ತಿದ್ದಳು. ಆಕೆ ಮಗುವಾಗಿದ್ದಾಗಲೂ, ಆಕೆಯ ಮನೆಯ ಜೀವಿತವು ಹೆಚ್ಚಿನದಾಗಿರಲಿಲ್ಲ. ನಮ್ಮ ಚರ್ಚೆಯಲ್ಲಿ ಆಕೆಗೆ "ಕ್ರಿಸ್ತನ ಮುಖಾಂತರ, ನೀನು ರಕ್ಷಿಸಲ್ಪಡಬಹುದು ಮತ್ತು ನಿನಗೆ ಸುಂದರವಾದ ಮನೆಯಿರಬಹುದು!" ಎಂದು ಹೇಳಿದೆನು. ನನ್ನ ಮಾತು ಆಕೆಗೆ ಯಾವುದೇ ಪ್ರೋತ್ಸಾಹಕೊಡಲಿಲ್ಲ. ಯಾಕೆ, ಎಂದು ನಾನು ಆಶ್ಚರ್ಯಪಟ್ಟೆನು ಮತ್ತು ಸುಂದರವಾದ ಮನೆಯು ಏನಾಗಿದೆಯೆಂಬುದನ್ನು ಕುರಿತು ಈ ಯುವ ಮಹಿಳೆಗೆ ವಿಚಾರವಿರಲಿಲ್ಲ ಎಂದು ಅರ್ಥ ಮಾಡಿಕೊಂಡೆನು. ಆಕರ್ಷಣೆಯುಳ್ಳ ಮತ್ತು ಅದ್ಭುತಕರವಾದ ಮನೆಯನ್ನು ಆಕೆ ಎಂದೂ ನೋಡಿ ರಲಿಲ್ಲ. ಆಕೆಯ ಅನುಭವಗಳು ಆಕೆಯ ಮನಸ್ಸಿನಲ್ಲಿ ಮನೆಯು ಆಧಾರವಾದದ್ದು, ಬಲಪಡಿಸುವಂಥದ್ದು ಮತ್ತು ಪ್ರೀತಿಸುವಂಥದ್ದು ಆಗಿರುವದೆಂಬ ಒಂದು ರೂಪವನ್ನು ಕೊಟ್ಟಿದ್ದವು; ಮನೆಯನ್ನು ಸುಂದರವಾದದ್ದರಂತೆ ದೃಷ್ಟಿಸಿಕೊಳ್ಳುವುದು ಆಕೆಗೆ ಕಠಿಣವಾದದ್ದಾಗಿತ್ತು. ಹೀಗಿದ್ದರೂ, ತನ್ನ ಸದಸ್ಯರ ಸಾಮಾನ್ಯವಾದ ದೈಹಿಕ, ಮಾನಸಿಕ, ಮತ್ತು ಆತ್ಮಿಕ ಆಗತ್ಯತೆಗಳನ್ನು ಪೂರೈಸುವ ಒಂದು ಮನೆಯನ್ನು ನೋಡಿ ದವನು ಸರಿಯಾಗಿ ರಚಿಸಲ್ಪಟ್ಟಾಗ ಮತ್ತು ಕ್ರಿಸ್ತನಿಂದ ನಡಿಸಲ್ಪಟ್ಟಾಗ ಮನೆಯು ಎಷ್ಟು ಸುಂದರವಾಗಿದೆ ಎಂಬುದನ್ನು ತಿಳಿದುಕೊಳ್ಳುವನು.

ಈ ಯುವ ಮಹಿಳೆಯಂತೆ, ಅನೇಕ ಜನರು ಸಭೆಯು ನಮ್ಮ ಆತ್ಮಿಕ ಅಗತ್ಯತೆಗ ಳನ್ನು ಹೇಗೆ ಪೂರೈಸುತ್ತದೆ ಎಂಬದನ್ನು ದೃಷ್ಟಿಸಿನೋಡಲಾರರು. ಅವರು ನಿಜವಾದ ಹೊಸ ಒಡಂಬಡಿಕೆಯ ಸಭೆಯ ಸುತ್ತಲೂ ಇರುವದಿಲ್ಲ. ಅವರು ಸಭೆಯನ್ನು ದೇವರ ಆತ್ಮಿಕ ಕುಟುಂಬದಂತೆ ನೋಡಿರುವದಿಲ್ಲ. ಆದುದರಿಂದ, ಕ್ರಿಸ್ತನ ಸಭೆಯನ್ನು ಬಿಟ್ಟು ಜೀವಿ ಸುತ್ತಿರುವಾಗ, ಆವರು ಏನನ್ನು ಕಳೆದುಕೊಂಡಿರುವರು ಎಂಬುದನ್ನು ತಿಳಿದುಕೊಳ್ಳು ವುದು ಅವರಿಗೆ ಕಷ್ಟವಾಗುತ್ತದೆ. ಈ ಪರಿಸ್ಥಿತಿಯಲ್ಲಿರುವ ಜನರಿಗೆ ಸಭೆಯು ಏನಾಗಿದೆ ಮತ್ತು ನಿಜವಾದ ಸಭೆಯು ದೇವರ ಕುಟುಂಬದಂತೆ ನಮ್ಮ ಜೀವಿತಗಳ ಆತ್ಮಿಕ ಆಯಾಮಗಳಿಗೆ ಹೇಗೆ ಉತ್ತರ ಕೊಡುತ್ತದೆ ಎಂಬುದನ್ನು ಜ್ಞಾಪಿಸುತ್ತಾ ಹೋಗುವುದು ಕ್ರೈಸ್ತರ ಕರ್ತವ್ಯವಾಗಿದೆ.

ದೇವರ ಕುಟುಂಬದ ಮುಖಾಂತರ ಮಾತ್ರವೇ ನಾವು ಸಮಾಧಾನವನ್ನು, ಭದ್ರತೆಯನ್ನು, ಉದ್ದೇಶವನ್ನು, ಹಾಗೂ ನಮ್ಮ ಅಂತರಾಳದ ಜೀವಿಗಳು ಬಯಸುವ ಗುರುತಿಸುವಿಕೆಯನ್ನು ಕಂಡುಕೊಳ್ಳಬಹುದು. ಈ ಕುಟುಂಬದಿಂದ, ಸಭೆಯಿಂದ

ಹೊರಗೆ ನಿಜವಾದ ಸಂತೋಷವು ನಮ್ಮದಾಗದು.

## ಅಗತ್ಯತೆಗಳು ಸುಂದರವಾಗಿ ಪೂರೈಸಲ್ಪಟ್ಟದ್ದು

ಸಭೆಯನ್ನು ದೇವರ ಕುಟುಂಬದಂತೆ ದೃಷ್ಟಿಸುವುದಕ್ಕೆ, ಯೆರೂಸಲೇಮಿನ ಸಭೆಯ ಬಗ್ಗೆ ಲೂಕನ ರೂಪರೇಷೆಯನ್ನು ಪ್ರತಿಬಿಂಬಿಸೋಣ. ಆದಿ ಕ್ರೈಸ್ತರ ಅನುದಿನದ ಜೀವಿತದಲ್ಲಿ ದೇವರ ಕುಟಂಬದ ಸುಂದರವಾದ ಗುಣಲಕ್ಷಣಗಳನ್ನು ಅವನ ವಿವರಣೆಯು ತೋರಿಸುತ್ತದೆ:

> ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.
>
> ... ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮ ತಮ್ಮ ಚರಸ್ಥಿರಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದಹಾಗೆ ಹಂಚಿಕೊಡುತ್ತಾ ಇದ್ದರು. ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿಮುರಿದು ಉಲ್ಲಾಸದಿಂದಲೂ ಸರಳ ಹೃದಯದಿಂದಲೂ ಊಟ ಮಾಡುತ್ತಾ ಇದ್ದರು; ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು (ಅಪೊಸ್ತಲರ ಕೃತ್ಯಗಳು 2:42-47)

ಪ್ರತಿಯೊಬ್ಬ ಕ್ರೈಸ್ತನಿಗೆ ಒಳಪಟ್ಟಿರುವ ಭಾವನೆ ಇರುತ್ತದೆ. ಯಾಕಂದರೆ, "ನಂಬಿದವರೆಲ್ಲರು ಒಗ್ಗಟ್ಟಾಗಿದ್ದು, ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಿದ್ದರು" (ಅಪೊಸ್ತಲರ ಕೃತ್ಯಗಳು 2:44). ಪ್ರತಿಯೊಬ್ಬನಿಗೆ ಐಕ್ಯತೆಯಿತ್ತು, ಯಾಕಂದರೆ ಯಾರೊಬ್ಬನೂ ಇನ್ನೊಬ್ಬನಿಗಿಂತ ಮೌಲ್ಯದಲ್ಲಿ ಹೆಚ್ಚಿನವನೆಂದು ಹೇಳಲ್ಪಡಲಿಲ್ಲ. ಕಷ್ಟದಲ್ಲಿರುವ ಯಾವುದೇ ಸದಸ್ಯನ ಕೊರತೆಗಳಿಗೆ ಇಡೀ ಸಭೆಯು ಉತ್ತರ ಕೊಟ್ಟಿತು. ಪ್ರತಿಯೊಬ್ಬನೂ ಸ್ವೀಕಾರವನ್ನು ಅನುಭವಿಸಿದನು. ದಿನದಿನವೂ ಕರ್ತನ ಸಭೆಗೆ ಜನರು ಕೂಡಿಸಲ್ಪಟ್ಟರು ಮತ್ತು ಸಭೆಯಿಂದ ಸಂತೋಷದಿಂದ ಸ್ವೀಕರಿಸಲ್ಪಟ್ಟರು. ಪ್ರತಿಯೊಬ್ಬ ಸದಸ್ಯನು ಸಾಮಾಜಿಕ ರೀತಿಯ ಜೀವನದಿಂದ ಮಾತ್ರವೇ ಒದಗಿಸಲ್ಪಡಬಹುದಾದ ಭದ್ರತೆಯನ್ನು ಅನುಭವಿಸಿದರು. ಅವರು "ತಮ್ಮ ತಮ್ಮ ಚರಸ್ಥಿರಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿ ಕೊಡುತ್ತಾ ಇದ್ದರು."

ದೇವರ ಕುಟುಂಬದ ಈ ಸಭೆಯು ಪ್ರಾರ್ಥನೆ, ಸ್ತೋತ್ರ ಬೋಧನೆ, ಅನ್ಯೋನ್ಯತೆ ಮತ್ತು ಕರ್ತನ ಭೋಜನ ಆಚರಿಸುವದರೊಂದಿಗೆ ಕ್ರಮಪ್ರಕಾರವಾದ ಆರಾಧನೆಯಲ್ಲಿ ತೊಡಗಿದ್ದರು (ಅಪೊಸ್ತಲರ ಕೃತ್ಯಗಳು 2:42). ಅವರು ತಮ್ಮ ಪರಲೋಕದ ತಂದೆಯನ್ನು ಕೊಂಡಾಡಿದರು, ತಮ್ಮ ಹಿರಿಯ ಸಹೋದರ ಯೇಸುಕ್ರಿಸ್ತನಿಂದ ಬಂದ ಕೃಪಾವರಗಳನ್ನು ಗುರುತಿಸಿಕೊಂಡರು, ಮತ್ತು ಸಂತೋಷದಿಂದಲೂ ಹೃದಯದ ಯಥಾರ್ಥತೆಯಿಂದಲೂ ಜೀವಿಸಿದರು. ಸಭೆಯ ಸಾಮಾಜಿಕ ಜೀವನ ಭದ್ರತೆಯನ್ನು, ಈ ಜೀವನಕ್ಕಾಗಿ ಪರೋಪಕಾರಿ ಜೋಪಾಸನೆಯನ್ನು, ಮತ್ತು ಬರಲಿಕ್ಕಿದ್ದ ಜಗತ್ತಿನಲ್ಲಿ

ಯೇಸುವಿನ ಮುಖಾಂತರ ನಿತ್ಯಜೀವದ ಆಶ್ವಾಸನೆಯನ್ನು ಅವರು ಅನುಭವಿಸಿದರು.

ಅನೇಕ ವರ್ಷಗಳ ಹಿಂದೆ ಒಂದು ಚಿಕ್ಕ ಸಭೆಗಾಗಿ ಒಂದು ವಾರ ಪ್ರಸಂಗಿಸುತ್ತಿದ್ದಾಗ, ದೇವಾಲಯದ ಕಟ್ಟಡಕ್ಕೆ ಹೊಂದಿ ಒಂದು ಚಿಕ್ಕ ಚಲಿಸುವ ಮನೆಯು ಚಲಿಸಲ್ಪಟ್ಟು ಇಡಲ್ಪಟ್ಟದ್ದನ್ನು ಗಮನಿಸಿದೆನು. ಹೆಚ್ಚಿನ ಒಂದು ಕ್ಲಾಸ್‌ರೂಮಿಗಾಗಿ ಅವರು ಅದನ್ನು ದೂಡಿ ಅಲ್ಲಿಟ್ಟಿದ್ದಾರೆಂದು ನಾನು ಕಲ್ಪಿಸಿಕೊಂಡೆನು. “ಆ ಚಲಿಸಲ್ಪಡುವ ಮನೆಯು ಯಾವುದಕ್ಕಾಗಿದೆ” ಎಂದು ಒಬ್ಬ ಸದಸ್ಯರನ್ನು ಪ್ರಶ್ನಿಸಿದೆನು. “ಅದು ನಮ್ಮ ವಿಧವೆಗಾಗಿ,” ಎಂದು ಆ ಸದಸ್ಯನು ಮುಗಳ್ನಗೆಯಿಂದ ವಿವರಿಸಿದನು. “ಈ ಸಭೆಯ ಒಬ್ಬ ಕ್ರೈಸ್ತ ಮನುಷ್ಯನು ಇತ್ತೀಚೆಗೆ ತೀರಿಹೋದನು, ಅವನ ಹೆಂಡತಿ ಒಬ್ಬಳೇ ಉಳಿದುಕೊಂಡಳು. ತನ್ನ ಜೀವನ ಸಾಗಿಸಲು ಮತ್ತು ಆಕೆ ಮಾಡಬೇಕಾದ ತೀರ್ಮಾನಗಳನ್ನು ಮಾಡಲು ಆಕೆಗೆ ತೊಂದರೆಯಾಯಿತು. ಆದುದರಿಂದ ಈ ಚಿಕ್ಕ ಚಲಿಸುವ ಮನೆಯನ್ನು ದೇವಾಲಯದ ಕಟ್ಟಡಕ್ಕೆ ಸಮೀಪದಲ್ಲಿ ಸ್ಥಳಾಂತರಿಸಿದೆವು. ಆಕೆಗೆ ಭದ್ರತೆಯೂ ಮತ್ತು ಆಕೆಗೆ ಅಗತ್ಯವಾದ ಸಹಾಯವೂ ಸಿಕ್ಕಲಿಕ್ಕಾಗುವಂತೆ ಆಕೆ ಅದರಲ್ಲಿ ಇರಲು ಬಿಟ್ಟುಕೊಟ್ಟಿದ್ದೇವೆ. ಯಾವುದೇ ರೀತಿಯಲ್ಲಿ ಸೇವೆಮಾಡದೇ ಇಲ್ಲಿ ವಾಸಿಸಲು ಆಕೆ ಬಯಸುವದಿಲ್ಲ, ಆದುದರಿಂದ ಕಟ್ಟಡಕ್ಕೆ ಅಗತ್ಯವಾಗಿರುವ ಸೇವೆಯನ್ನು ಮಾಡಲಿಕ್ಕೆ ಆಕೆಗೆ ಅವಕಾಶ ಕೊಟ್ಟಿದ್ದೇವೆ” ಎಂದೂ ಅವನು ಹೇಳಿದನು. ಸದಸ್ಯನಿಂದ ಈ ವಿವರಣೆಯನ್ನು ನಾನು ಆಲಿಸುತ್ತಿದ್ದಂತೆ, “ಇದು ದೇವರ ಕುಟುಂಬಕ್ಕೆ ಲಕ್ಷಣವಾಗಿರುವ ಸುಂದರವಾದ ಜೋಪಾಸನೆ ಮತ್ತು ಚಿಂತನೆಯಾಗಿದೆ” ಎಂದು ಯೋಚಿಸಿದನು.

## ಮುಕ್ತಾಯ

ದೇವರ ಕುಟುಂಬದ ಸದಸ್ಯನಾಗಿರಲು ನೀನು ಬಯಸುವಿಯೋ? ದೇವರ ಕುಟುಂಬವನ್ನು, ಸಭೆಯನ್ನು ನೀನು ಪ್ರವೇಶಿಸುವ ವರೆಗೆ ನಿಮ್ಮ ಜೀವಿತವು ಸಂಪೂರ್ಣವಾಗಲಾರದೆಂದು ನೀವು ಅರ್ಥಮಾಡಿಕೊಳ್ಳುವಿರೋ? ಆತನ ಕುಟುಂಬದ ಹೊರಗೆ, ಆತ್ಮಿಕ ಸ್ಥಿರತೆಯನ್ನೂ, ಭದ್ರತೆಯನ್ನೂ, ಸ್ವೀಕಾರವನ್ನೂ, ಮತ್ತು ಆತನ ಕುಟುಂಬದಲ್ಲಿಯ ಸದಸ್ಯತ್ವವು ಮಾತ್ರವೇ ಕೊಡಬಲ್ಲ ಗುರುತನ್ನು ನೀವು ಕಳೆದುಕೊಳ್ಳುವಿರಿ.

ಅನಾಥನಾಗಿರುವ ವಿಚಾರದಿಂದ ಪ್ರತಿಯೊಂದು ಮಗುವು ನಡಗುತ್ತದೆ ಮತ್ತು ಪ್ರತಿಯೊಬ್ಬ ವಯಸ್ಕನ ಹೃದಯವು ಅವನು ಒಬ್ಬ ಅನಾಥನನ್ನು ನೋಡುವಾಗ ನೋವಿನಿಂದ ಕೂಗುತ್ತದೆ. ಯಾರೂ ಅನಾಥರಾಗಿರುವದನ್ನು ಬಯಸುವದಿಲ್ಲ, ಯಾರೂ ಅನಾಥನನ್ನು ನೋಡಬಯಸುವದಿಲ್ಲ. ಜೀವನದ ದುಷ್ಟ ಪರಿಸರಗಳಿಂದ ಇಲ್ಲವೇ ಮಾನವ ಅನ್ಯಾಯದಿಂದ ಮಕ್ಕಳನ್ನು ತಿರಸ್ಕರಿಸುವದನ್ನು ನಾವು ಒಟ್ಟಾಗಿ ಪ್ರತಿಬಂಧಿಸಲಾರೆವು; ಪ್ರೀತಿಯಲ್ಲಿ ಸಹಾನುಭೂತಿಯಲ್ಲಿ, ಮತ್ತು ಸಹಾಯದಲ್ಲಿ ನಾವು ಅನಾಥರನ್ನು ತಲುಪಬಹುದಾಗಿದೆ. ಹಾಗಿದ್ದರೂ ಯಾರೂ ಆತ್ಮಿಕವಾಗಿ ಅನಾಥರಾಗಿರುವ ಅಗತ್ಯತೆಯಿರುವದಿಲ್ಲ. ಸುವಾರ್ತೆಯ ಮುಖಾಂತರ, ಯಾರಾದರೂ ದೇವರ ಕುಟುಂಬದಲ್ಲಿ ಬರಬಹುದು, ಆತನ ಮಗುವಾಗಿ ಸ್ವೀಕರಿಸಲ್ಪಡಬಹುದು ಮತ್ತು ಇತರ ಎಲ್ಲಾ ಮಕ್ಕಳು ಸ್ವೀಕರಿಸುವ ಪ್ರೀತಿಯನ್ನು ಮತ್ತು ಪುತ್ರತ್ವವನ್ನು ಸ್ವೀಕರಿಸಬಹುದು.

ದೇವರ ಕುಟುಂಬವನ್ನು ನಾವು ಆತ್ಮಿಕ ಜನನದಿಂದ ಪ್ರವೇಶಿಸುತ್ತೇವೆ. “ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ

ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5). ಕ್ರಿಸ್ತನಲ್ಲಿ ನಂಬಿಕೆಯಿಡಲು (ಯೋಹಾನ 8:24), ಪಾಪಕ್ಕಾಗಿ ಮಾನಸಾಂತರ ಪಡಲು (ಅಪೊಸ್ತಲರ ಕೃತ್ಯಗಳು 17:30), ಯೇಸುವನ್ನು ಕ್ರಿಸ್ತನಂತೆ ಮತ್ತು ಕರ್ತನಂತೆ ಅರಿಕೆ ಮಾಡಲು (ರೋಮಾಪುರ 10:10) ಮತ್ತು ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಲು (1 ಕೊರಿಂಥ 12:13) ನಾವು ದೇವರ ವಾಕ್ಯದ ಮುಖಾಂತರ ಆತ್ಮನಿಂದ ನಡಿಸಲ್ಪಡುತ್ತೇವೆ. "ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು ಅದು ದೇವರ ಸದಾಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು" (1 ಪೇತ್ರ 1:23) ಎಂದು ಪೇತ್ರನು ಹೇಳಿದನು.

ನೀರಿನಿಂದಲೂ ಆತ್ಮನಿಂದಲೂ ಹುಟ್ಟಿದ ತನ್ನ ಮಕ್ಕಳನ್ನು ದೇವರು ಸ್ವೀಕರಿಸುತ್ತಾನೆ. ಆತನು ಅವರಿಗೆ ತನ್ನ ಆತ್ಮವನ್ನು (ಗಲಾತ್ಯ 4:6), ತನ್ನ ಕುಟುಂಬದ ಆಶೀರ್ವಾದಗಳನ್ನು (ಎಫೆಸ 1:3), ಮತ್ತು ನಿತ್ಯ ಬಾಧ್ಯಸ್ಥಿಕೆಯನ್ನು (ಎಫೆಸ 1:11) ಕೊಡುತ್ತಾನೆ. ಅದರ ಪರಿಣಾಮವಾಗಿ ದೇವರ ಮಕ್ಕಳು, ಹೊಂದಿಕೊಂಡಿರುವ, ಭದ್ರತೆಯ, ಸ್ವೀಕಾರದ ಮತ್ತು ಗುರುತಿಸುವಿಕೆಯ ಅರ್ಥದೊಂದಿಗೆ ಜೀವಿಸುವರು.

ನೀವು ದೇವರ ಮಗುವಾಗಿರುವಿಯೋ?

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಮನೆಯ ಮುಖಾಂತರ ನೀವು ಅನುಭವಿಸಿದ ಆನಂದಗಳನ್ನು ಯಾದಿ ಮಾಡಿರಿ.
2. ಒಬ್ಬನು ದೇವರ ಕುಟುಂಬವನ್ನು ಹೇಗೆ ಪ್ರವೇಶಿಸುವನು?
3. ದೇವರು ತನ್ನ ಮಕ್ಕಳಂತೆ ನಮ್ಮನ್ನು ಯಾವಾಗ ಸ್ವೀಕರಿಸುವನು?
4. ಪ್ರತಿಯೊಬ್ಬ ವ್ಯಕ್ತಿಗಿರುವ ಪ್ರಾಮಾಣಿಕ ಅಗತ್ಯತೆಗಳ ಯಾದಿ ಮಾಡಿರಿ ಮತ್ತು ಈ ಅಗತ್ಯತೆಗಳನ್ನು ಕುಟುಂಬವು ಹೇಗೆ ಪೂರೈಸುತ್ತದೆ ಎಂಬುದನ್ನು ವಿವರಿಸಿರಿ.
5. ಪ್ರಾಮಾಣಿಕ ಮಾನವ ಅಗತ್ಯತೆಗಳೊಂದಿಗೆ ನಮ್ಮ ಆತ್ಮಿಕ ಅಗತ್ಯತೆಗಳನ್ನು ಹೋಲಿಸಿರಿ?
6. ಒಬ್ಬ ಕ್ರೈಸ್ತನು ಒಂದು ಭಾಗವಾಗಿರುವ ಆತ್ಮಿಕ ಕುಟುಂಬವನ್ನು ವಿವರಿಸಿರಿ.
7. ದೇವರ ಕುಟುಂಬವು ನಮಗೆ ಆತ್ಮಿಕ ಭದ್ರತೆಯನ್ನು ಹೇಗೆ ಕೊಡುತ್ತದೆ?
8. ದೇವರ ಕುಟುಂಬವು ನಮಗೆ ಆತ್ಮಿಕವಾದ ಸಂಬಂಧವಿರುವ ಭಾವನೆಯನ್ನು ಹೇಗೆ ಕೊಡುತ್ತದೆ.
9. ದೇವರ ಕುಟುಂಬವು ನಮಗೆ ಆತ್ಮಿಕ ಗುರುತಿಸುವಿಕೆಯನ್ನು ಹೇಗೆ ಕೊಡುತ್ತದೆ?
10. ದೇವರ ಕುಟುಂಬವು ನಮಗೆ ಆತ್ಮಿಕ ಸ್ವೀಕರಿಸುವಿಕೆಯ ಭಾವನೆಯನ್ನು ಹೇಗೆ ಕೊಡುತ್ತದೆ?
11. ಸಭೆಯಲ್ಲಿರುವುದು ನಮ್ಮ ಆತ್ಮಿಕ ಅಗತ್ಯತೆಗಳನ್ನು ಹೇಗೆ ಪೂರೈಸುವುದು ಎಂಬುದಕ್ಕೆ ಯೆರೂಸಲೇಮ ಸಭೆಯನ್ನು ಒಂದು ಉದಾಹರಣೆಯಂತೆ ಉಪಯೋಗಿಸಿರಿ.
12. ದೇವರ ಆತ್ಮಿಕ ಕುಟುಂಬದಲ್ಲಿ ಒಬ್ಬನು ಪ್ರವೇಶಿಸುವವರೆಗೆ, ಒಬ್ಬನು ಸಂಪೂರ್ಣನಾಗಿರುವನೋ?
13. ದೇವರ ಕುಟುಂಬದ ಹೊರಗಿರುವವನು ಒಂದು ರೀತಿಯಲ್ಲಿ ಅನಾಥನಂತೆ ಇರುವನೋ?
14. ದೇವರ ಆತ್ಮಿಕ ಕುಟುಂಬದಲ್ಲಿ ನೀವು ವಿಶೇಷವಾಗಿ ಅನುಭವಿಸಿದ ಆಶೀರ್ವಾದಗಳ ಯಾದಿ ಮಾಡಿರಿ?

© 2009 Truth for Today